# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 766 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸುಳ್ಳು ಸುದ್ದಿಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು;</td><td>
ಸುಳ್ಳು ಸುದ್ದಿಗಳನ್ನು ಮಾಡುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ದಾಖಲಾದ ವರ್ಷವಾರು ಪ್ರಕರಣಗಳ ಮಾಹಿತಿ ಕೆಳಗಿನಂತಿದೆ.
<table>
<tr><th>ಕ್ರಸ</th><th>ವರ್ಷ</th><th>ದಾಖಲಾದ ಪ್ರಕರಣ ಸಂಖ್ಯೆ</th></tr>
<tr><td>1</td><td>2023</td><td>106</td></tr>
<tr><td>2</td><td>2024</td><td>137</td></tr>
<tr><td>3</td><td>2025</td><td>13</td></tr>
<tr><td></td><td>ಒಟ್ಟು</td><td>256</td></tr>
</table>
ಸಾಮಾಜಿಕ ಜಾಲತಾಣ ಸೇರಿದಂತೆ ಇನ್ನಿತರ ಮೂಲಗಳ ಮೂಲಕ ಸುಳ್ಳುಸುದ್ದಿ ಪ್ರಸರಣ ತಡೆಗೆ ಪೊಲೀಸ್ ಇಲಾಖೆ ಕೈಗೊಂಡ ಕ್ರಮಗಳ ಮಾಹಿತಿ ಕೆಳಗಿನಂತಿದೆ:-
<ul>
<li>ಸಾಮಾಜಿಕ ಜಾಲತಾಣವನ್ನು ವ್ಯಾಪಕವಾಗಿ ಬಳಸಿಕೊಂಡು ನಕಲಿ ಖಾತೆಗಳ ಮೂಲಕ ಸುಳ್ಳು ಸುದ್ದಿ ಹಬ್ಬಿಸುವ, ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವವರು, ಧರ್ಮ, ಮತ, ಭಾಷೆ, ಪ್ರಾಂತ್ಯ, ವರ್ಣ ಇತ್ಯಾದಿ ಇವುಗಳನ್ನು ಬಳಸಿಕೊಂಡು ದ್ವೇಷ ಪ್ರೇರಿತ ಪೋಸ್ಟ್ ಮಾಡುವವರ ಖಾತೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.</li>
<li>ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ ಸಾಮಾಜಿಕ ಜಾಲತಾಣ ನಿಗಾ ಘಟಕದ ಮೂಲಕ ಆಯಾ ಠಾಣಾ ವ್ಯಾಪ್ತಿಯಲ್ಲಿನ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ನಕಲಿ ಖಾತೆಗಳ ಮೇಲೆ ನಿಗಾವಹಿಸಲು ಒಬ್ಬ ಅಧಿಕಾರಿ ಮತ್ತು ಇಬ್ಬರು ಸಿಬ್ಬಂದಿಗಳಿಗೆ ಜಿಲ್ಲಾ ಸಾಮಾಜಿಕ ಜಾಲತಾಣ ನಿಗಾ ಘಟಕ ಮತ್ತು ರಾಜ್ಯ ಗುಪ್ತವಾರ್ತೆ ವತಿಯಿಂದ ವಿಶೇಷ ತರಬೇತಿ ನೀಡಲಾಗಿರುತ್ತದೆ. ಜಿಲ್ಲಾ ಸಾಮಾಜಿಕ ಜಾಲತಾಣ ನಿಗಾ ಘಟಕದ ಅಧಿಕಾರಿ ಮತು ಸಿಬ್ಬಂದಿಗಳು ರಾಜ್ಯ ಗುಪ್ತವಾರ್ತೆ ಕಡೆಯಿಂದ ವಿಶೇಷ ತರಬೇತಿ ಪಡೆದಿರುತ್ತಾರೆ.</li>
<li>ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ಪೋಸ್ಟ್‌ಗಳನ್ನು ಕೂಡಲೇ ಅಧಿಕಾರಿಗಳ ಹಾಗೂ ರಾಜ್ಯ ಸಾಮಾಜಿಕ ಜಾಲತಾಣ ನಿಗಾ ಘಟಕದ ಗಮನಕ್ಕೆ ತರಲಾಗುತ್ತದೆ.</li>
<li>ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವವರು, ಧರ್ಮ, ಮತ, ಭಾಷೆ, ಪ್ರಾಂತ್ಯ, ವರ್ಣ ಇತ್ಯಾದಿ ಇವುಗಳನ್ನು ಬಳಸಿಕೊಂಡು ದ್ವೇಷ ಪ್ರೇರಿತ ಪೋಸ್ಟ್‌ಗಳು ಕಂಡುಬಂದರೆ ಕೂಡಲೆ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.</li>
<li>ಸುಳ್ಳು ಸುದ್ದಿಗಳ ಬಗ್ಗೆ ಕೆಎಸ್‌ಪಿ ಫ್ಯಾಕ್ಟ್‌ಚೆಕ್ ಮೂಲಕ ಫ್ಯಾಕ್ಟ್‌ಚೆಕ್ ಮಾಡಿಸಿ ನೈಜ ಮಾಹಿತಿಯನ್ನು ಇಲಾಖೆಯ ಅಧಿಕೃತ ಜಾಲತಾಣದ ಮೂಲಕ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತದೆ.</li>
<li>Law Enforcement Agency request portal ಮೂಲಕ ಸಂಬಂಧಪಟ್ಟ</li>
</ul>
</td></tr>
</table>

| | | |
|---|---|---|
| | | ಸೋಷಿಯಲ್ ಮೀಡಿಯಾ ಫ್ಲಾಟ್‌ಫಾರಂಗಳಿಗೆ ನೋಟೀಸ್ ಮತ್ತು ಮನವಿಗಳ ಮೂಲಕ ಮಾಹಿತಿ ಪಡೆದು ತಪ್ಪಿತಸ್ಥರ ವಿರುದ್ಧ ಐಪಿಸಿ / ಬಿಎನ್‌ಎಸ್ ಮತ್ತು ಐ.ಟಿ. ಕಾಯ್ದೆ ಅಡಿಯಲ್ಲಿ ಪ್ರಕರಣಗಳ ದಾಖಲಿಸಿ ಕ್ರಮಕೈಗೊಳ್ಳಲಾಗುತ್ತಿದೆ. |
| ಆ | ಸರ್ಕಾರದ ಯೋಜನೆಯ ಭಾಗವಾಗಿದ್ದ Information disorder tackling unit ರಚನೆ ಆಗಿದೆಯೇ; | ಸರ್ಕಾರದ ಯೋಜನೆಯ ಭಾಗವಾಗಿದ್ದ Information Disorder Tackling Unit ರಚನೆಯಾಗಿರುತ್ತದೆ. |
| ಇ | ಹಾಗಿದ್ದಲ್ಲಿ, ಕಾರ್ಯನಿರ್ವಹಿಸುತ್ತಿರುವ ತಂಡಗಳ ಸಂಖ್ಯೆ ಎಷ್ಟು; ಇದಕ್ಕೆ ತಗುಲಿದ ವೆಚ್ಚವೆಷ್ಟು? | Information Disorder Tackling Unitನಲ್ಲಿ ಪ್ರಸ್ತುತ 4 ಏಜೆನ್ಸಿಗಳು IDTU ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಏಜೆನ್ಸಿಗಳಿಗೆ ರೂ.118 ಲಕ್ಷ (GST ಸೇರಿ) ವೆಚ್ಚ ತಗುಲಿದ್ದು, ವಿವರ ಈ ಕೆಳಕಂಡಂತಿರುತ್ತದೆ:-<br><br>1. Logically infomedia Pvt. Ltd.- Rs. 90, 68, 305<br>2. Trylika Technologies Pvt. Ltd.-Rs.9.5 Lakhs<br>3. Newplus Communication Pvt. Ltd.-Rs.12,15,400<br>4. Gaurimedia-Rs.5,66,400 |

ಸಂಖ್ಯೆ: ಹೆಚ್‌ಡಿ 24 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು